## ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : **1463(1620)**

ಸದಸ್ಯರ ಹೆಸರು : **ಡಾ: ಎಂ.ಜಿ. ಮುಳೆ (ವಿಧಾನ ಸಭೆಯಿಂದ ಚುನಾಯಿತರಾದವರು)**

ಉತ್ತರಿಸುವ ದಿನಾಂಕ : **19.12.2025**

ಉತ್ತರಿಸುವ ಸಚಿವರು : **ಮಾನ್ಯ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು**

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಕಲ್ಯಾಣ ಕರ್ನಾಟಕ ಅಭಿವೃದ್ಧಿ ಮಂಡಳಿಯು ಪ್ರಸಕ್ತ ಸಾಲಿನಲ್ಲಿ ಯಾವ ಯಾವ ಅಭಿವೃದ್ಧಿ ಕಾಮಗಾರಿಗಳನ್ನು ತೆಗದುಕೊಳ್ಳಲು ಉದ್ದೇಶಿಸಲಾಗಿದೆ: (ಪೂರ್ಣ ವಿವರಗಳನ್ನು ವಿಧಾನ ಸಭಾ ಕ್ಷೇತ್ರವಾರು ಅಂಕಿ ಅಂಶಗಳಲ್ಲಿ ಒದಗಿಸುವುದು) | 2025-26ನೇ ಸಾಲಿನಲ್ಲಿ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯಿಂದ ಕಲ್ಯಾಣ ಕರ್ನಾಟಕ ಭಾಗದಲ್ಲಿ ಸರ್ವತೋಮುಖ ಅಭಿವೃದ್ಧಿಗಾಗಿ ಅಕ್ಷರ ಆವಿಷ್ಕಾರ, ಆರೋಗ್ಯ ಆವಿಷ್ಕಾರ ಯೋಜನೆ, ವಸತಿ ನಿಲಯ ಶಾಲೆಗಳು, ವಿಶ್ವವಿದ್ಯಾಲಯಗಳು, ರಸ್ತೆ & ಚರಂಡಿ, ರಸ್ತೆ & ಸಂಪರ್ಕ ಕುಡಿಯುವ ನೀರು ಸರಬರಾಜು, ಶುದ್ಧ ಕುಡಿಯುವ ನೀರಿನ ಘಟಕಗಳು, ಪ್ರವಾಸೋದ್ಯಮ, ಕ್ರೀಡೆ, ಸಾರಿಗೆ, ನಗರ/ಗ್ರಾಮೀಣ ಪ್ರದೇಶಗಳಲ್ಲಿ ಮೂಲಭೂತ ಸೌಕರ್ಯಗಳು, ಕೃಷಿ, ತೋಟಗಾರಿಕೆ, ಅರಣ್ಯೀಕರಣ, ಕೌಶಲ್ಯಾಭಿವೃದ್ಧಿ, ಸಣ್ಣ ಕೈಗಾರಿಕೆ ಹಾಗೂ ಇತರ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿರುತ್ತದೆ.<br>ವಿಧಾನ ಸಭಾ ಕ್ಷೇತ್ರವಾರು ಅನುದಾನ ಹಂಚಿಕೆ ಮಾಡದೇ ಇರುವುದರಿಂದ ಅಂಕಿ ಅಂಶಗಳು ಲಭ್ಯವಿರುವುದಿಲ್ಲ. |
| (ಆ) | ಇದಕ್ಕಾಗಿ ಎಷ್ಟು ಹಣವನ್ನು ವೆಚ್ಚ ಮಾಡಲಾಗುವುದು: ಈ ಬಗ್ಗೆ ಅಂದಾಜು ವೆಚ್ಚವನ್ನು ಮಂಡಳಿಗೆ ಸಲ್ಲಿಸಿದೆಯೇ: | 2025-26ನೇ ಸಾಲಿನ ಆಯವ್ಯಯದಲ್ಲಿ ರೂ. 5000.00 ಕೋಟಿಗಳನ್ನು ಮಂಡಳಿಗೆ ನಿಡುವುದು ಎಂದು ಘೋಷಿಸಲಾಗಿದೆ ಆದರೆ ಆರ್ಥಿಕ ಇಲಾಖೆಯ ಬೇಡಿಕೆ ಸಂಖ್ಯೆ(6) ರಲ್ಲಿ ಮಂಡಳಿಗೆ ರೂ. 3000 ಕೋಟಿಗಳನ್ನು ನಿಗದಿಪಡಿಸಲಾಗಿದೆ.<br>ಆದ್ದರಿಂದ ಕಾಮಗಾರಿಗಳ ಪ್ರಗತಿಯ ಅನುಸಾರ ಸದರಿ ಅನುದಾವನ್ನು ವೆಚ್ಚ ಮಾಡಲಾಗುತ್ತದೆ. |
| (ಇ) | ಮಂಡಳಿಯಿಂದ ಕಳೆದ ಮೂರು ವರ್ಷಗಳಲ್ಲಿ ಜಿಲ್ಲೆಯ ಪ್ರತಿ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ತೆಗೆದುಕೊಂಡಿರುವ ಕಾಮಗಾರಿಗಳಾವುವು; ಮತ್ತು ಈ ಪ್ರತಿ ಕಾಮಗಾರಿಗೆ ಮಾಡಿರುವ ವೆಚ್ಚ ಎಷ್ಟು: | ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯ ಅನುದಾನವನ್ನು ಡಾ. ಡಿ.ಎಂ ನಂಜುಂಡಪ್ಪ ವರದಿಯ ಸಿ.ಡಿ.ಐ ಸೂಚ್ಯಾಂಕದ ಆಧಾರದ ಮೇಲೆ ಮೈಕ್ರೋ ಯೋಜನೆಯಡಿ ತಾಲ್ಲೂಕುವನ್ನು ಒಂದು ಘಟಕವನ್ನಾಗಿ ಪರಿಗಣಿಸಿ, ತಾಲ್ಲೂಕುವಾರು ಹಾಗೂ ಮ್ಯಾಕ್ರೋ ಯೋಜನೆಯಡಿ ಜಿಲ್ಲೆಯನ್ನು ಒಂದು ಘಟಕವನ್ನಾಗಿ ಪರಿಗಣಿಸಿ, ಜಿಲ್ಲಾವಾರು ಅನುದಾನವನ್ನು ಹಂಚಿಕೆ ಮಾಡಲಾಗುತ್ತಿದೆ. ಆದ್ದರಿಂದ ವಿಧಾನಸಭಾ ಕ್ಷೇತ್ರವಾರು ಅನುದಾನ ಹಂಚಿಕೆ ಮಾಡಲಾಗುತ್ತಿಲ್ಲ.<br>ಆದರೆ, ಕಳೆದ ಮೂರು ವರ್ಷಗಳಲ್ಲಿ ಬೀದರ್ ಜಿಲ್ಲೆಗೆ ಸಂಬಂಧಿಸಿದ ತಾಲ್ಲೂಕಗಳ ಕಾಮಗಾರಿಗಳಿಗೆ ರೂ.88087.50 ಲಕ್ಷಗಳ ಅನುದಾನ ವೆಚ್ಚ ಮಾಡಲಾಗಿದೆ. ತಾಲ್ಲೂಕುವಾರು ಕಾಮಗಾರಿಗಳಿಗೆ ವೆಚ್ಚ ಮಾಡಿರುವ ಅನುದಾನದ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ. |

**(ಈ)** ಈ ಪೈಕಿ ಎಷ್ಟು ಕಾಮಗಾರಿಗಳು ಪೂರ್ಣಗೊಂಡಿವೆ ಮತ್ತು ಎಷ್ಟು ಅಪೂರ್ಣವಾಗಿವೆ; (ಪ್ರತಿ ಪೂರ್ಣ ಮತ್ತು ಅಪೂರ್ಣ ಕಾಮಗಾರಿಗಳ ವಿವರಗಳನ್ನು ವಿಧಾನ ಸಭಾ ಕ್ಷೇತ್ರವಾರು ಅಂಕಿ ಅಂಶಗಳಲ್ಲಿ ಒದಗಿಸುವುದು)

ವಿಧಾನ ಸಭಾ ಕ್ಷೇತ್ರವಾರು ಮಾಹಿತಿ ಲಭ್ಯವಿರುವುದಿಲ್ಲ. ಆದರೆ ತಾಲ್ಲೂಕುವಾರು ಮಾಹಿತಿಯನುಸಾರ 2088 ಕಾಮಗಾರಿಗಳ ಪೈಕಿ 1418 ಕಾಮಗಾರಿಗಳು ಪೂರ್ಣಗೊಂಡಿವೆ, 568 ಕಾಮಗಾರಿಗಳು ಪ್ರಗತಿಯಲ್ಲಿವೆ ಮತ್ತು 102 ಕಾಮಗಾರಿಗಳು ಇನ್ನು ಪ್ರಾರಂಭಗೊಂಡಿರುವುದಿಲ್ಲ. ವಿವರ ಈ ಕೆಳಗಿನಂತಿವೆ.

| Year | Taluka | No of Works | Completed | Under Progress | Not Started |
|---|---|---|---|---|---|
| 2022-23 | Aurad | 115 | 109 | 6 | 0 |
| | Basvakalyan | 98 | 95 | 3 | 0 |
| | Bhalki | 59 | 49 | 10 | 0 |
| | Bidar | 152 | 137 | 15 | 0 |
| | Humnabad | 62 | 61 | 1 | 0 |
| | **Total** | **486** | **451** | **35** | **0** |
| 2023-24 | Aurad | 122 | 101 | 16 | 5 |
| | Basvakalyan | 205 | 184 | 17 | 4 |
| | Bhalki | 122 | 83 | 39 | 0 |
| | Bidar | 178 | 138 | 38 | 2 |
| | Humnabad | 173 | 123 | 47 | 3 |
| | **Total** | **800** | **629** | **157** | **14** |
| 2024-25 | Aurad | 91 | 23 | 54 | 14 |
| | Basvakalyan | 190 | 84 | 92 | 14 |
| | Bhalki | 107 | 14 | 75 | 18 |
| | Bidar | 160 | 75 | 55 | 30 |
| | Humnabad | 254 | 142 | 100 | 12 |
| | **Total** | **802** | **338** | **376** | **88** |
| | **Grand Total** | **2088** | **1418** | **568** | **102** |

**(ಉ)** ಬಾಕಿ ಇರುವ ಕಾಮಗಾರಿಗಳನ್ನು ನಿಗದಿತ ಸಮಯದಲ್ಲಿ ಪೂರ್ಣಗೊಳಿಸಲು ಸರ್ಕಾರದ ಮುಂದಿರುವ ಕ್ರಮಗಳೇನು?

ಮಾನ್ಯ ಯೋಜನಾ ಸಚಿವರ ಅಧ್ಯಕ್ಷತೆಯಲ್ಲಿ, ಮಾನ್ಯ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ, ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರ ಅಧ್ಯಕ್ಷತೆಯಲ್ಲಿ ಮತ್ತು ಯೋಜನಾ ಇಲಾಖೆಯ ಸರ್ಕಾರದ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಮಂಡಳಿಯ ಪ್ರಗತಿ ಪರಿಶೀಲನಾ ಸಭೆಗಳನ್ನು ನಡೆಸಿ ಕಾಮಗಾರಿಗಳನ್ನು ತ್ವರಿತವಾಗಿ ಪೂರ್ಣಗೊಳಿಸಿ ಪ್ರಗತಿ ಸಾಧಿಸುವಂತೆ ಸೂಚಿಸಲಾಗಿರುತ್ತದೆ.

ಅಲ್ಲದೇ, ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯಿಂದ ಪ್ರತಿ 15 ದಿನಗಳಿಗೊಮ್ಮೆ ಜಿಲ್ಲಾಧಿಕಾರಿಗಳು/ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಹಾಗೂ ಜಿಲ್ಲಾ ಮಟ್ಟದ ಅನುಷ್ಠಾನಾಧಿಕಾರಿಗಳೊಂದಿಗೆ ಪ್ರಗತಿ ಪರಿಶೀಲನಾ ಸಭೆಯನ್ನು ಜರುಗಿಸಿ, ನಿಗದಿತ ಅವಧಿಯಲ್ಲಿ ಹಾಗೂ ತ್ವರಿತಗತಿಯಲ್ಲಿ ಕಾಮಗಾರಿಗಳನ್ನು ಪೂರ್ಣಗೊಳಿಸಲು ಮಂಡಳಿಯಿಂದ ಕ್ರಮ ಕೈಗೊಳ್ಳಲಾಗುತ್ತಿದೆ.

**ಸಂಖ್ಯೆ: ಪಿಡಿಎಸ್ 90 ಹೆಚ್‌ಕೆಡಿ 2025**

**(ಡಿ.ಸುಧಾಕರ್)**
ಯೋಜನೆ, ಕಾರ್ಯಕ್ರಮ ಸಂಯೋಜನೆ
ಮತ್ತು ಸಾಂಖ್ಯಿಕ ಇಲಾಖೆ ಸಚಿವರು.